# ಸಂಕಲನಾತ್ಮಕ ಮೌಲ್ಯಮಾಪನ-1

## ಅರ್ಧವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ನೀಲನಕ್ಷೆ

**ತರಗತಿ: 10ನೇ ತರಗತಿ** **ವಿಷಯ: ಸಮಾಜ ವಿಜ್ಞಾನ**

### ಉದ್ದಿಷ್ಟವಾರು ಅಂಕ ಹಂಚಿಕೆ

| ಕ್ರ ಸಂ | ಉದ್ದಿಷ್ಟ | ಅಂಕ | ಶೇಕಡವಾರು |
|---|---|---|---|
| 1 | ಜ್ಞಾನ | 13 | 16% |
| 2 | ತಿಳುವಳಿಕೆ | 40 | 50% |
| 3 | ಅನ್ವಯ | 22 | 28% |
| 4 | ಕೌಶಲ | 5 | 6% |
| | ಒಟ್ಟು | 80 | 100% |

### ಕ್ಲಿಷ್ಟತಾನುಸಾರ ಅಂಕ ಹಂಚಿಕೆ

| ಕ್ರ ಸಂ | ಕಠಿಣತೆಯ ಮಟ್ಟ | ಅಂಕಗಳು | ಶೇಕಡವಾರು |
|---|---|---|---|
| 1 | ಸುಲಭ | 24 | 30% |
| 2 | ಸಾಧಾರಣ | 40 | 50% |
| 3 | ಕಠಿಣ | 16 | 20% |
| | ಒಟ್ಟು | 20 | 100% |

### ವಿಭಾಗವಾರು ಮತ್ತು ಪ್ರಶ್ನೆವಾರು ಅಂಕ ಹಂಚಿಕೆ

| ವಿಭಾಗ | WEIGHTAGE | MCQ | VSA | SA | LA1 | LA2 | MAP | ಒಟ್ಟು |
|---|---|---|---|---|---|---|---|---|
| ಇತಿಹಾಸ | 25 | 1(2) | 1(2) | 2(2) | 3(3) | 4(2) | - | 11(25) |
| ರಾಜ್ಯಶಾಸ್ತ್ರ | 11 | 1(1) | 1(1) | 2(1) | 3(1) | 4(1) | - | 5(11) |
| ಸಮಾಜಶಾಸ್ತ್ರ | 08 | 1(2) | 1(1) | 2(1) | 3(1) | - | - | 5(8) |
| ಭೂಗೋಳಶಾಸ್ತ್ರ | 22 | 1(1) | 1(2) | 2(2) | 3(2) | 4(1) | 5(1) | 9(22) |
| ಅರ್ಥಶಾಸ್ತ್ರ | 07 | 1(1) | 1(1) | 2(1) | 3(1) | - | - | 4(7) |
| ವ್ಯ. ಅಧ್ಯಯನ | 07 | 1(1) | 1(1) | 2(1) | 3(1) | - | - | 4(7) |
| ಒಟ್ಟು | 80 | 8(8) | 8(8) | 16(8) | 27(9) | 16(4) | 5(1) | 38(80) |

# ಘಟಕವಾರು ಅಂಕ ಹಂಚಿಕೆ

| ಕ್ರ. ಸಂ | ಘಟಕಗಳು | ಜ್ಞಾನ | | | | | ತಿಳುವಳಿಕೆ | | | | | ಅನ್ವಯ | | | | | ಕೌಶಲ | ಪ್ರಶ್ನೆ ಸಂಖ್ಯೆ | ಒಟ್ಟು ಅಂಕ |
|---|---|---|---|---|---|---|---|---|---|---|---|---|---|---|---|---|---|---|---|
| | **ಇತಿಹಾಸ** | MCQ | VSA | SA | LA1 | LA2 | MCQ | VSA | SA | LA1 | LA2 | MCQ | VSA | SA | LA1 | LA2 | | | |
| 1 | ಭಾರತಕ್ಕೆ ಯುರೋಪಿಯನ್ನರ ಆಗಮನ | | | 1(2) | | | | 1(1) | | | | | | | 1(3) | | | 02 | 03 |
| 2 | ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ | | 1(1) | | | | | | | | | | | | 1(3) | | | 02 | 04 |
| 3 | ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು | | | | | | | | | 1(3) | | 1(1) | | | | | | 02 | 04 |
| 4 | ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು | | | | | | | | 1(2) | 1(3) | 1(4) | | | | | | | 02 | 05 |
| 5 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು | 1(1) | | | | | | | | | 1(4) | | | | | | | 02 | 05 |
| 6 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ | | | | | | | | | | | | | | | 1(4) | | 01 | 04 |
| | **ರಾಜ್ಯಶಾಸ್ತ್ರ** | | | | | | | | | | | | | | | | | | |
| 1 | ಭಾರತದ ಸಮಸ್ಯೆಗಳು&ಪರಿಹಾರೋಪಾಯಗಳು | | | | | | | | | | 1(4) | | | | | | | 01 | 04 |
| 2 | ಭಾರತದ ವಿದೇಶಾಂಗ ನೀತಿ | | | 1(2) | | | 1(1) | | | | | | | | 1(3) | | | 02 | 04 |
| 3 | ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ | | | 1(2) | | | | 1(1) | | | | | | | | | | 02 | 03 |
| | **ಸಮಾಜಶಾಸ್ತ್ರ** | | | | | | | | | | | | | | | | | | |
| 1 | ಸಾಮಾಜಿಕ ಸ್ತರ ವಿನ್ಯಾಸ | | | | | | 1(1) | | | 1(3) | | | | 1(2) | | | | 02 | 04 |
| 2 | ದುಡಿಮೆ | 1(1) | 1(1) | | | | | | | | | | | 1(2) | | | | 03 | 04 |
| | **ಭೂಗೋಳ ವಿಜ್ಞಾನ** | | | | | | | | | | | | | | | | | | |
| 1 | ಭಾರತದ ಸ್ಥಾನ ಮತ್ತು ವಿಸ್ತೀರ್ಣ | | | | | | | | | | | | | | | | 2* | 01 | 02 |
| 2 | ಭಾರತದ ಮೇಲ್ಮೈ ಲಕ್ಷಣಗಳು | | | | | | | | 1(2) | | | | | | 1(3) | | 1* | 01 | 03 |

| | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| 3 | ಭಾರತದ ವಾಯುಗುಣ | | | | | | | | 1(2) | | | | 1(1) | | | | | 02 | 03 |
| 4 | ಭಾರತದ ಮಣ್ಣುಗಳು | | | | | | | | | | | | | | 1(3) | | | 01 | 03 |
| 5 | ಭಾರತದ ಅರಣ್ಯ ಸಂಪತ್ತು | | | | 1(3) | | | | | | | | | | | | | 01 | 03 |
| 6 | ಭಾರತದ ಜಲಸಂಪನ್ಮೂಲಗಳು | | | | | | 1(1) | | | | | | 1(1) | | | | 2* | 02 | 04 |
| 7 | ಭಾರತದ ಭೂ ಸಂಪನ್ಮೂಲಗಳು | | | | | | | | | | 1(4) | | | | | | | 01 | 04 |
| | **ಅರ್ಥಶಾಸ್ತ್ರ** | | | | | | | | | | | | | | | | | | |
| 1 | ಅಭಿವೃದ್ಧಿ | | 1(1) | | | | | | | 1(3) | | | | 1(2) | | | | 02 | 03 |
| 2 | ಗ್ರಾಮೀಣ ಅಭಿವೃದ್ಧಿ | | | | | | 1(1) | | | 1(3) | | | | | | | | 02 | 04 |
| | **ವ್ಯವಹಾರ ಅಧ್ಯಯನ** | | | | | | | | | | | | | | | | | 04 | 07 |
| 1 | ಬ್ಯಾಂಕಿನ ವ್ಯವಹಾರಗಳು | 1(1) | | | | | | | | 1(3) | | | | 1(2) | | | | 02 | 03 |
| 2 | ಉದ್ಯಮಗಾರಿಕೆ | | | | | | | 1(1) | | 1(3) | | | | | | | | 02 | 04 |
| | ಒಟ್ಟು | 3(3) | 3(3) | 2(4) | 1(3) | | 4(4) | 3(3) | 3(6) | 5(15) | 3(12) | 1(1) | 2(2) | 3(6) | 3(9) | 1(4) | 1(5) | **38** | **80** |

**ಸೂಚನೆಗಳು:–**

- ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳ ಸಂಖ್ಯೆಯನ್ನೂ ಆವರಣದ ಒಳಗಿನ ಅಂಕೆಯು ಅಂಕಗಳನ್ನು ಸೂಚಿಸುತ್ತವೆ.
- ಹಳದಿ ಬಣ್ಣವೂ ಆಯ್ಕೆಯ ಪ್ರಶ್ನೆಗಳನ್ನು ಸೂಚಿಸುತ್ತವೆ.
- * ಚಿನ್ಹೆಯು ನಕ್ಷೆಯ ಪ್ರಶ್ನೆಗಳನ್ನು ಸೂಚಿಸುತ್ತದೆ.

# ಅರ್ಧವಾರ್ಷಿಕ ಪರೀಕ್ಷೆ

**ವಿಷಯ: ಸಮಾಜ ವಿಜ್ಞಾನ** | **ತರಗತಿ: 10ನೇ ತರಗತಿ**

**ಸಮಯ: 3 ಗಂಟೆಗಳು** | **ಗರಿಷ್ಠ ಅಂಕಗಳು: 80**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರ ಬರೆಯಲು ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರಗಳೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.** **8x1=8**

1. ಭಾರತದಲ್ಲಿ ಬ್ರಿಟಿಷರು 1909ರ ಭಾರತೀಯ ಪರಿಷತ್ ಕಾಯ್ದೆಯನ್ನು ಈ ಕೆಳಗಿನ ಯಾವ ಉದ್ದೇಶ ಸಾಧನೆಗೆ ಬಳಸಿಕೊಂಡರು.
   ಎ) ಕಂಪನಿಯ ಭ್ರಷ್ಟಾಚಾರ ತಡೆಯಲು ಬಿ) ಭಾರತೀಯರನ್ನು ಒಡೆದು ಆಳಲು
   ಸಿ) ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಲು ಡಿ) ಭಾರತೀಯರಿಗೆ ಶಿಕ್ಷಣ ನೀಡಲು
2. "ಕಾಲ ಬದಲಾದಂತೆ ಧರ್ಮವನ್ನು ಅರ್ಥೈಸಿಕೊಳ್ಳುವ ಮತ್ತು ಪರಿಭಾವಿಸುವ ರೀತಿಯೂ ಬದಲಾಗಬೇಕು, ಇಲ್ಲದಿದ್ದರೆ ಧರ್ಮವೆಂಬುದು ಜಡವಾಗುತ್ತದೆ" ಎಂದು ಹೇಳಿದವರು.
   ಎ) ದಯಾನಂದ ಸರಸ್ವತಿ ಬಿ) ಸರ್ ಸಯ್ಯದ್ ಅಹಮದ್ ಖಾನ್
   ಸಿ) ಸ್ವಾಮಿ ವಿವೇಕಾನಂದ ಡಿ) ಮಹಾತ್ಮ ಜ್ಯೋತಿಭಾ ಫುಲೆ
3. ಭಾರತ ವಿಶ್ವಶಾಂತಿ ಹಾಗೂ ಸಹಬಾಳ್ವೆಗೆ ಪೂರಕವಾದ ವಿದೇಶಾಂಗ ನೀತಿಗೆ ವಿಶೇಷವಾಗಿ ಒತ್ತು ನೀಡಿದೆ. ಕಾರಣ
   ಎ) 3ನೇ ಮಹಾಯುದ್ಧದ ಭೀತಿಯುಂಟಾಗಿದೆ. ಬಿ) ಭಾರತವು ಶಾಂತಿಪ್ರಿಯ ರಾಷ್ಟ್ರವಾಗಿದೆ.
   ಸಿ) ಭಾರತವು ಅಣ್ವಸ್ತ್ರ ರಾಷ್ಟ್ರವಾಗಿದೆ. ಡಿ) ಸಂಪೂರ್ಣ ನಿಶ್ಶಸ್ತ್ರೀಕರಣ ವಿಫಲವಾಗಿದೆ.
4. ಚಾತುರ್ವರ್ಣ ವ್ಯವಸ್ಥೆಯು ರೂಪಿತಗೊಂಡಿದ್ದು
   ಎ) ಕರ್ಮ ಸಿದ್ಧಾಂತದ ತತ್ವದಡಿಯಲ್ಲಿ ಬಿ) ವರ್ಣ ಸಿದ್ಧಾಂತದ ತತ್ವದಡಿಯಲ್ಲಿ
   ಸಿ) ಜಾತಿ ಸಿದ್ಧಾಂತದ ತತ್ವದಡಿಯಲ್ಲಿ ಡಿ) ಜ್ಞಾನ ಸಿದ್ಧಾಂತದ ತತ್ವದಡಿಯಲ್ಲಿ
5. ಇಂದಿನ ಮಾಹಿತಿ ಸಮಾಜ ಅಥವಾ ಡಿಜಿಟೆಲ್ ಸಮಾಜದಲ್ಲಿ ಶ್ರಮವಿಭಜನೆಯ ಪ್ರಕಾರಗಳು ರೂಪಾಂತರಗೊಂಡಿರುವುದು
   ಎ) ಯಂತ್ರೋಪಕರಣಗಳ ಮೂಲಕ ಬಿ) ಸಾಮಾಜಿಕ ಸ್ತರವಿನ್ಯಾಸದ ಮೂಲಕ
   ಸಿ) ವಿಶೇಷ ಪರಿಣತಿಯ ಮೂಲಕ ಡಿ) ಗಣಕಯಂತ್ರಗಳ ಮೂಲಕ
6. ದಕ್ಷಿಣ ಭಾರತದಲ್ಲಿ ಪೂರ್ವಕ್ಕೆ ಹರಿಯುವ ನದಿಗಳ ಸರಿಯಾದ ಜೋಡಿಯನ್ನು ಗುರುತಿಸಿ.
   ಎ) ಗಂಗಾ, ಶರಾವತಿ, ಕೃಷ್ಣ ಮತ್ತು ಕಾವೇರಿ ಬಿ) ಮಹಾನದಿ, ಗೋದಾವರಿ, ಕೃಷ್ಣ ಮತ್ತು ಕಾವೇರಿ
   ಸಿ) ಕಾಳಿ, ಗೋದಾವರಿ, ಕೃಷ್ಣ ಮತ್ತು ನೇತ್ರಾವತಿ ಡಿ) ಮಹಾನದಿ, ಸಿಂಧೂ, ಕೃಷ್ಣ ಮತ್ತು ಬ್ರಹ್ಮಪುತ್ರ
7. ಪಂಚಾಯತ್ ರಾಜ್ಯ ಸಂಸ್ಥೆಗಳ ಒಂದು ಮಹತ್ವದ ಕಾರ್ಯವೆಂದರೆ
   ಎ) ಸ್ಥಳೀಯ ಯೋಜನೆಗಳನ್ನು ಸಿದ್ಧಪಡಿಸುವುದು ಬಿ) ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದು
   ಸಿ) ಪೌರಸಂಸ್ಥೆಗಳ ಮೇಲ್ವಿಚಾರಣೆ ಮಾಡುವುದು ಡಿ) ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವುದು
8. ದಿನವೊಂದಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸ ಬಹುದಾದ ಖಾತೆ
   ಎ) ಉಳಿತಾಯ ಖಾತೆ ಬಿ) ಆವರ್ತ ಠೇವಣಿ ಖಾತೆ ಸಿ) ಚಾಲ್ತಿ ಖಾತೆ ಡಿ) ನಿಶ್ಚಿತ ಠೇವಣಿ ಖಾತೆ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:** **8x1=8**

9. ಭಾರತದಲ್ಲಿ ಬ್ರಿಟಿಷರು ರಾಜಕೀಯ ಪರಮಾಧಿಕಾರ ಸ್ಥಾಪಿಸಲು ಕಾರಣವೇನು?
10. ಬೆಸ್ಸಿನ್ ಒಪ್ಪಂದದ ಐತಿಹಾಸಿಕ ಮಹತ್ವವೇನು?
11. ಭಾರತದ ವಿದೇಶಾಂಗ ನೀತಿ ನಿರೂಪಣೆಯಲ್ಲಿ ಸಂವಿಧಾನದ 51ನೇ ವಿಧಿಯು ಮಹತ್ವದ್ದಾಗಿದೆ. ಏಕೆ?
12. ಸಾಮಾಜಿಕ ಭದ್ರತೆ ಎಂದರೇನು?
13. ಈಶಾನ್ಯ ರಾಜ್ಯಗಳು ಅಧಿಕ ಮಳೆಯನ್ನು ಪಡೆಯುತ್ತವೆ. ಹೇಗೆ?
14. ನದಿ ಕಣಿವೆ ಯೋಜನೆಗಳಿಂದ ನಿರುಪಯುಕ್ತ ಭೂಮಿಯ ಮೇಲಾಗುವ ಪರಿಣಾಮವೇನು?
15. ನೈಜ ವರಮಾನ ಅಥವಾ ಹಣದ ವಾಸ್ತವಿಕ ಖರೀದಿ ಸಾಮರ್ಥ್ಯವನ್ನು ಹೇಗೆ ಕಂಡು ಹಿಡಿಯಬಹುದು?
16. ಪ್ರಸ್ತುತ ದಿನಮಾನಗಳಲ್ಲಿ ಸ್ವಉದ್ಯೋಗ ಸಂಸ್ಥೆಗಳಿಗೆ ಉತ್ತೇಜನ ನೀಡುವುದು ಅನಿವಾರ್ಯವಾಗಿದೆ. ಏಕೆ?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ:** **8x2=16**

17. ಹೊಸ ಜಲಮಾರ್ಗದ ಅನ್ವೇಷಣೆಗೆ ಪ್ರೇರಣೆಯಿತ್ತ ಅಂಶಗಳಾವುವು?
18. ಸುರಪುರ ಸಂಸ್ಥಾನದ ಪ್ರಗತಿಯಲ್ಲಿ ಮೆಡೋಸ್ ಟೇಲರ್ ರವರ ಪಾತ್ರ ಮಹತ್ವದ್ದಾಗಿದೆ. ಹೇಗೆ?

19. ಭಾರತ ಮತ್ತು ಪಾಕಿಸ್ತಾನ ಉತ್ತಮ ಬಾಂಧವ್ಯ ಹೊಂದಲು ನಡೆಸಿದ ಪ್ರಯತ್ನಗಳೇನು?

ಅಥವಾ

ಭಾರತದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಅಡಕವಾಗಿರುವ ಸಂಗತಿಗಳಾವುವು?

20. ಸಂಭಾವನೆ ರಹಿತ ದುಡಿಮೆ ಮತ್ತು ಸಂಭಾವನೆ ಸಹಿತ ದುಡಿಮೆಗಿರುವ ವ್ಯತ್ಯಾಸಗಳೇನು?

ಅಥವಾ

ಅಸ್ಪೃಶ್ಯತೆಯು ಅತ್ಯಂತ ಅಮಾನವೀಯ ವ್ಯವಸ್ಥೆಯಾಗಿದೆ. ಈ ಹೇಳಿಕೆಯನ್ನು ವಿಮರ್ಶಿಸಿ.

21. ಭಾರತದ ದ್ವೀಪ ಸಮೂಹಗಳ ಬಗ್ಗೆ ಟಿಪ್ಪಣಿ ಬರೆಯಿರಿ.

22. ನೈಋತ್ಯ ಮಾನ್ಸೂನ್ ಮಾರುತಗಳ ಪ್ರಕ್ರಿಯೆಗಳನ್ನು ವಿವರಿಸಿ.

23. ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ. ಸಮರ್ಥಿಸಿ.

24. ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ. ಕಾರಣ ಕೊಡಿ.

## IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ: 9x3=27

25. ಸಹಾಯಕ ಸೈನ್ಯ ಪದ್ಧತಿಯು ದೇಶೀಯ ದೊರೆಗಳನ್ನು ಬ್ರಿಟಿಷರ ನಿಯಂತ್ರಣಕ್ಕೆ ಒಳಪಡಿಸಿತು. ಹೇಗೆ?

ಅಥವಾ

ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು. ಸ್ಪಷ್ಟೀಕರಿಸಿ.

26. ಭಾರತದಲ್ಲಿ ಬ್ರಿಟಿಷರ ಕಾಲಾವಧಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಾದ ಬದಲಾವಣೆಗಳನ್ನು ತಿಳಿಸಿ.

27. 2ನೇ ಆಂಗ್ಲೋ ಮೈಸೂರು ಯುದ್ಧಕ್ಕೆ ಕಾರಣ ಮತ್ತು ಅದರ ಪರಿಣಾಮಗಳನ್ನು ವಿವರಿಸಿ.

28. ಭಾರತವು ಸ್ವತಂತ್ರ ಕಾರ್ಯಶೈಲಿಯ ವಿದೇಶಾಂಗ ನೀತಿಯನ್ನು ಹೇಗೆ ರೂಪಿಸಿತು?

29. ಶೈಕ್ಷಣಿಕ ಸಮಾನತೆಯನ್ನು ಸ್ಥಾಪಿಸಲು ನಮ್ಮ ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು ವಿವರಿಸಿ.

30. ದೇಶವೊಂದರ ಆರ್ಥಿಕಾಭಿವೃದ್ಧಿಗೆ ಮಣ್ಣಿನ ಸವೆತವು ತೊಡಕಾಗುತ್ತೆಂದು ಹೇಗೆ ಹೇಳುವಿರಿ?

ಅಥವಾ

ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಉತ್ತರದ ಹಿಮಾಲಯ ಪರ್ವತಗಳು ಮಹತ್ವದ ಪಾತ್ರವಹಿಸುತ್ತವೆಂದು ಹೇಗೆ ಹೇಳುವಿರಿ?

31. ಭಾರತದಲ್ಲಿ ಕಂಡು ಬರುವ ವಿವಿಧ ಪ್ರಕಾರದ ಅರಣ್ಯಗಳನ್ನು ಹೆಸರಿಸಿ.

32. ಗಾಂಧೀಜಿಯವರ ಗ್ರಾಮಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ತಿಳಿಸಿ.

ಅಥವಾ

ಉತ್ಪಾದನಾಂಗಗಳ ಪೂರೈಕೆಯಲ್ಲಿನ ಬದಲಾವಣೆಗೆ ಕಾರಣಗಳೇನು?

33. ಆರ್ಥಿಕ ಆಭಿವೃದ್ಧಿಯಲ್ಲಿ ಉದ್ಯಮಿಯ ಪಾತ್ರವೇನು?

ಅಥವಾ

ಒಂದು ಹಣಕಾಸು ಸಂಸ್ಥೆ ಬ್ಯಾಂಕೆಂದು ಕರೆಸಿಕೊಳ್ಳಬೇಕಾದರೆ ಅದು ಹೊಂದಿರಬೇಕಾದ ಅಗತ್ಯ ಗುಣಲಕ್ಷಣಗಳೇನು?

## V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ: 4x4=16

34. ಭಾರತೀಯ ಸಮಾಜ ಸುಧಾರಣಾ ಚಳುವಳಿಗೆ ಬ್ರಹ್ಮ ಸಮಾಜವು ಹೇಗೆ ಶ್ರಮಿಸಿತು? ವಿವರಿಸಿ.

ಕಿತ್ತೂರಿನಲ್ಲಿ ನಡೆದ ಬ್ರಿಟಿಷ್ ವಿರೋಧಿ ಹೋರಾಟವನ್ನು ವಿವರಿಸಿ.

35. 1857ರ ದಂಗೆಯು ಬ್ರಿಟಿಷರನ್ನು ಭಾರತದಿಂದ ಹೊರ ಹಾಕುವಲ್ಲಿ ವಿಫಲವಾಯಿತು ಏಕೆ?

36. ಭಾರತದಲ್ಲಿ ಭ್ರಷ್ಟಾಚಾರಕ್ಕೆ ಕಾರಣ ಹಾಗೂ ಅದರ ಪರಿಣಾಮಗಳನ್ನು ತಿಳಿಸಿ.

37. ಭಾರತದಲ್ಲಿ ಕಂಡು ಬರುವ ವ್ಯವಸಾಯದ ವಿವಿಧ ಪ್ರಕಾರಗಳನ್ನು ವಿವರಿಸಿ.

## VI. ಭಾರತದ ನಕ್ಷೆಯನ್ನು ಬರೆದು ಇವುಗಳನ್ನು ಗುರುತಿಸಿ: 1+4=5

38. ಎ) ಭಾರತೀಯ ಆದರ್ಶ ಕಾಲಮಾನ ರೇಖಾಂಶ

ಬಿ) ದಕ್ಷಿಣ ಭಾರತದ ಅತ್ಯುನ್ನತ ಶಿಖರ

ಸಿ) ಭಾರತದ ಮೊಟ್ಟಮೊದಲ ನದಿ ಕಣಿವೆ ಯೋಜನೆ

ಡಿ) ಭಾರತದ ಉದ್ದವಾದ ನದಿ

ರಚನೆ
ಸಂತೋಷ್ ಕುಮಾರ್ ಸಿ
ಸರ್ಕಾರಿ ಪ್ರೌಢಶಾಲೆ ಬನ್ನಿಕಲ್ಲು
ಹ ಬೊ ಹಳ್ಳಿ(ತಾ) ಬಳ್ಳಾರಿ(ಜಿ)
9742534454